# ಕುವೆಂಪು ವಿಶ್ವವಿದ್ಯಾನಿಲಯ

**ನಿರ್ದೇಶಕರ ಕಾರ್ಯಾಲಯ**

**ದೂರ ಶಿಕ್ಷಣ ನಿರ್ದೇಶನಾಲಯ**

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ - 577 451, ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ದೂರವಾಣಿ : 08282 256450, 256246, 256426


ಸಂಖ್ಯೆ: ಕುವಿ/ದೂಶಿನಿ-ಎಫ್.ಎ. /2010-11 ದಿನಾಂಕ: 27-11-2010

## ಆಂತರಿಕ ಮೌಲ್ಯ ಮಾಪನದ ಸಾರಲೇಖಗಳನ್ನು ಬರೆಯುವ ವಿದ್ಯಾರ್ಥಿಗಳಿಗೆ ಸೂಚನೆಗಳು

***ವಿದ್ಯಾರ್ಥಿಗಳು ಈ ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿದ ನಂತರವೇ ಸಾರಲೇಖಗಳನ್ನು ಸಿದ್ದಪಡಿಸುವುದು ಮತ್ತು ಸಲ್ಲಿಸುವುದು.***

1. ಈ ಪತ್ರದೊಂದಿಗೆ ನೀವು ಬರೆಯಬೇಕಾದ ಪತ್ರಿಕೆಗಳ ಸಂಖ್ಯೆ ಎಷ್ಟು ಇವೆಯೋ ಅಷ್ಟು ಉತ್ತರ ಪತ್ರಿಕೆಗಳನ್ನು ನಿಮಗೆ ಕಳುಹಿಸಲಾಗಿದೆ. ಒಂದೊಂದು ಪತ್ರಿಕೆಗೆ, ಒಂದೊಂದು ಉತ್ತರ ಪತ್ರಿಕೆಯನ್ನು ಪ್ರತ್ಯೇಕವಾಗಿ ಬಳಸತಕ್ಕದ್ದು.
2. ಪ್ರತೀ ಉತ್ತರ ಪತ್ರಿಕೆಯ ಮುಖಪುಟದಲ್ಲಿ ತಪ್ಪದೇ 1) ನಿಮ್ಮ ಹೆಸರು 2) ನೋಂದಣಿ ಸಂಖ್ಯೆ 3)ಪದವಿ ಹಾಗೂ ವರ್ಷ 4) ಪತ್ರಿಕೆ ಸಂಖ್ಯೆ ಮತ್ತು ಶೀರ್ಷಿಕೆ 5) ಅಧ್ಯಯನ ಕೇಂದ್ರದ ಹೆಸರು - ಈ ಎಲ್ಲಾ ಮಾಹಿತಿಗಳನ್ನು ದಪ್ಪ ಅಕ್ಷರಗಳಲ್ಲಿ ಅಚ್ಚು ಕಟ್ಟಾಗಿ ಬರೆಯಬೇಕು. ಯಾವ ಅಂಕಣವನ್ನು ಖಾಲಿ ಬಿಡಿಬಾರದು.
3. ಸಾರಲೇಖಗಳನ್ನು ತಪ್ಪದೇ ಸ್ವ ಹಸ್ತಾಕ್ಷರದಲ್ಲಿಯೇ ಬರೆಯಬೇಕು.
4. ಬರೆದಿರುವ ಸಾರಲೇಖಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **15-04-2011**
5. ಸಾರಲೇಖ ಬರೆದಿರುವ ಎಲ್ಲಾ ಉತ್ತರ ಪತ್ರಿಕೆಗಳನ್ನು ಒಟ್ಟು ಮಾಡಿ ಪಿನ್ ಮಾಡುವುದಾಗಲಿ, ಹೊಲಿಯುವುದಾಗಲಿ, ಬೈಂಡ್-ಸ್ಪೈರಲ್ ಬೈಂಡ್ ಮಾಡುವುದಾಗಲಿ ಮಾಡಬಾರದು. ಸಾರಲೇಖಗಳನ್ನು ಕಳುಹಿಸಲು ತಮಗೆ ಪ್ರತ್ಯೇಕವಾಗಿ ಕಳುಹಿಸಿರುವ ಕವರ್‌ನಲ್ಲೇ ಹಾಕಿ, ಕವರ್‌ನ ಮೇಲ್ಭಾಗದಲ್ಲಿ ನೀಡಬೇಕಾಗಿರುವ ಎಲ್ಲಾ ಮಾಹಿತಿಗಳನ್ನು ತಪ್ಪದೇ ಬರೆದು ಕಳುಹಿಸುವುದು.
6. ಅ. **ದೂರ ಶಿಕ್ಷಣ ನಿರ್ದೇಶನಾಲಯದಲ್ಲಿ ನೇರವಾಗಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು;** ತಾವು ಉತ್ತರಿಸಿರುವ ಆಂತರಿಕ ಮೌಲ್ಯಮಾಪನದ ಸಾರಲೇಖಗಳನ್ನು ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ - 577 451 ಈ ವಿಳಾಸಕ್ಕೆ, ನೋಂದಾಯಿತ ಅಂಚೆ (ಸ್ವೀಕೃತಿಯೊಂದಿಗೆ) ಮೂಲಕ ಸಲ್ಲಿಸುವುದು. ಈ ಉದ್ದೇಶಕ್ಕಾಗಿ ನೀಡಿರುವ ಲಕೋಟೆಯನ್ನೇ ಬಳಸಬೇಕು.

   ಆ. **ಅಧ್ಯಯನ ಕೇಂದ್ರಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು** ತಾವು ಉತ್ತರಿಸಿರುವ ಸಾರಲೇಖಗಳನ್ನು ಸಲ್ಲಿಸುವ ಉದ್ದೇಶಕ್ಕಾಗಿ ನೀಡಿರುವ ಲಕೋಟೆಯಲ್ಲಿ ಹಾಕಿ, ಮೇಲ್ಭಾಗದಲ್ಲಿ ನೀಡಬೇಕಾಗಿರುವ ಮಾಹಿತಿಯನ್ನು ಬರೆದು, ತಾವು ಪ್ರವೇಶ ಪಡೆದಿರುವ ಅಧ್ಯಯನ ಕೇಂದ್ರಗಳಲ್ಲಿ ಸಲ್ಲಿಸುವುದು.
7. ನಿಗದಿತ ದಿನಾಂಕದೊಳಗೆ ತಲುಪದೇ ಇರುವ ಹಾಗೂ ತಡವಾಗಿ ಕಳುಹಿಸುವ ಸಾರಲೇಖಗಳ ಹಾಗೂ ತಡವಾಗಿ ತಲುಪಿದಕ್ಕೆ ಮೌಲ್ಯ ಮಾಪನಕ್ಕೆ, ಕುವೆಂಪು ವಿಶ್ವವಿದ್ಯಾನಿಲಯ, ದೂರ ಶಿಕ್ಷಣ ನಿರ್ದೇಶನಾಲಯ ಜವಾಬ್ದಾರಿಯಲ್ಲ. ಈ ಕುರಿತಂತೆ ದೂರು ಸಲ್ಲಿಸುವುದಾಗಲಿ, ನೋಂದಾಯಿತ ಅಂಚೆ, ಕೋರಿಯರ್ ಇವುಗಳ ಮೂಲಕ ಸಲ್ಲಿಸಿರುವ ರಶೀದಿ, ಸ್ವೀಕೃತಿಗಳೊಂದಿಗೆ ನೀಡುವ ಯಾವುದೇ ದೂರನ್ನು ಸ್ವೀಕರಿಸಲಾಗುವುದಿಲ್ಲ.
8. ನೇರವಾಗಿ ಅಂತಿಮ ವರ್ಷಕ್ಕೆ (Lateral Entry Provision ಮೂಲಕ) ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ವರ್ಷದ ಸಾರಲೇಖಗಳನ್ನು ಪತ್ರಿಕೆವಾರು (ಪ್ರಥಮ ಮತ್ತು ದ್ವಿತೀಯ ವರ್ಷ) ಪ್ರತ್ಯೇಕವಾಗಿ ಬರೆದು ಸಲ್ಲಿಸಬೇಕು (ಒಂದು ವೇಳೆ ಪ್ರಥಮ ವರ್ಷದ ಪರೀಕ್ಷೆಯನ್ನು ತದನಂತರದ ವರ್ಷದಲ್ಲಿ ತೆಗೆದುಕೊಳ್ಳುತ್ತಿರುವವರೂ ಕೂಡ).
9. ವಿದ್ಯಾರ್ಥಿಗಳು ಸಾರಲೇಖಗಳನ್ನು ಬರೆಯಲು ದೂರ ಶಿಕ್ಷಣ ನಿರ್ದೇಶನಾಲಯದ ಉತ್ತರ ಪತ್ರಿಕೆಗಳನ್ನೆ ಬಳಸಬೇಕು. ತಮ್ಮ ಸ್ವಂತ ಪತ್ರಿಕೆ ಅಥವಾ ಹಾಳೆಗಳಲ್ಲಿ ಹಾಗೂ ನಿರ್ದಿಷ್ಟ ಮುಖಪುಟವಿಲ್ಲದಿರುವ ಹಾಳೆಗಳಲ್ಲಿ ಬರೆದು ಕಳುಹಿಸಿದಲ್ಲಿ ಅಂತಹವುಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುತ್ತದೆ.

   ಸಾರಲೇಖದ ಉತ್ತರ ಪತ್ರಿಕೆಗಳು ತಲುಪದೇ ಇದ್ದಲ್ಲಿ ಅಥವಾ ಬೇಕಿರುವ ಸಂಖ್ಯೆಗಿಂತ ಕಡಿಮೆ ಉತ್ತರ ಪ್ರತ್ರಿಕೆಗಳು ಇದ್ದಲ್ಲಿ ತಕ್ಷಣ ದೂರ ಶಿಕ್ಷಣ ನಿರ್ದೇಶನಾಲಯದ ಕಛೇರಿ ಅಥವಾ ಸಂಬಂಧಿಸಿದ ಅಧ್ಯಯನ ಕೇಂದ್ರಗಳನ್ನು ಸಂಪರ್ಕಿಸುವುದು.